**ಕರಾವಳಿ ನಿರ್ವಹಣಾ ವಲಯದ ಕರಡು ಅಧಿಸೂಚನೆ 2008ನ್ನು ಪರಿಶೀಲಿಸಿ ನೋಡಲು ಪ್ರೊ: ಎಂ.ಎಸ್. ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ತಜ್ಞ ಸಮಿತಿಯ ದಿನಾಂಕ 16-7-2009 ರ ವರದಿಯ ಸಾರಾಂಶ**

ಕರಾವಳಿ ಪ್ರದೇಶದ ಪರಿಸರವನ್ನು ಸಂರಕ್ಷಿಸುವ ಉದ್ದೇಶಕ್ಕಾಗಿ ಪರಿಸರ ಮತ್ತು ಅರಣ್ಯ ಮಂತ್ರಾಲಯವು ಕರಾವಳಿ ನಿಯಂತ್ರಣ ವಲಯ (ಸಿಆರ್‌ಜೆಡ್) ಅಧಿಸೂಚನೆ 1991ನ್ನು ಹೊರಡಿಸಿದೆ. ಈ ಅಧಿಸೂಚನೆಯು ಕರಾವಳಿ ನಿಯಂತ್ರಣ ವಲಯದಲ್ಲಿ ನಡೆಸತಕ್ಕ ವಿವಿಧ ಚಟುವಟಿಕೆಗಳನ್ನು ನಿಯಂತ್ರಿಸುತ್ತಿದೆ.

2. ಸದರಿ ಅಧಿಸೂಚನೆಯನ್ನು ಕಾರ್ಯಗತಗೊಳಿಸುವಾಗ 1991ರಿಂದ 2009ರವರೆಗೆ ಅದಕ್ಕೆ 25 ತಿದ್ದುಪಡಿಗಳನ್ನು ತರಲಾಗಿದೆ.

3. ಒಳಗೊಂಡ ಅಂಶಗಳನ್ನು ಒಟ್ಟಾರೆ ಪರಿಪೂರ್ಣ ದೃಷ್ಟಿಯಿಂದ ಪರಿಶೀಲಿಸಿ ನೋಡುವ ಸಲುವಾಗಿ ಮಂತ್ರಾಲಯವು ಪ್ರೊ: ಎಂ.ಎಸ್. ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ ಒಂದು ತಜ್ಞ ಸಮಿತಿಯನ್ನು 2004 ರ ಜೂನ್ ನಲ್ಲಿ ರಚಿಸಿತು. ಈ ಸಮಿತಿಯು ತನ್ನ ವರದಿಯನ್ನು 2005ರಲ್ಲಿ ಸಲ್ಲಿಸಿದೆ. ಸಮಿತಿಯ ಶಿಫಾರಸ್ಸುಗಳನ್ನು ಆಧರಿಸಿ ಮಂತ್ರಾಲಯವು 1-5-2008ರಂದು ಕರಡು ಕರಾವಳಿ ನಿರ್ವಹಣಾ ವಲಯ (ಸಿಎಂಜೆಡ್) ಅಧಿಸೂಚನೆಯನ್ನು ಹೊರಡಿಸಿತು ಮತ್ತು 9-5-2008ರಂದು ಒಂದು ತಿದ್ದುಪಡಿಯನ್ನು ಮಾಡಿ ಸದರಿ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 60 ದಿನಗಳೊಳಗೆ ಸಾರ್ವಜನಿಕರು ಸಲಹೆಗಳನ್ನು ಮತ್ತು ಆಕ್ಷೇಪಣೆಗಳನ್ನು ಕಳುಹಿಸಿಕೊಡಬೇಕೆಂದು ಪರಿಸರ ಸಂರಕ್ಷಣಾ ಅಧಿನಿಯಮ, 1986ರ ಅನುಸಾರವಾಗಿ ಆಹ್ವಾನಿಸಿ ಹೊರಡಿಸಿದೆ. ಅಲ್ಲದೆ, ರಾಜ್ಯ ಸರ್ಕಾರಗಳು ಸಲ್ಲಿಸಿದ ವಿನಂತಿಗಳನ್ನು ಆಧರಿಸಿ ಸಲಹೆಗಳನ್ನು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲು ಕರಡು ಅಧಿಸೂಚನೆಯ ಅವಧಿಯನ್ನು ವಿಸ್ತರಿಸಿ 22-7-2008ರಂದು ಪುನ: ಅಧಿಸೂಚನೆ ಮಾಡಲಾಯಿತು. ಪರಿಸರ ಸಂರಕ್ಷಣಾ ಅಧಿನಿಯಮ, 1986 ರ ಪ್ರಕಾರ ಒಂದು ಕರಡು ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ 365 ದಿನಗಳ ಒಳಗೆ ಅದನ್ನು ಅಂತಿಮಗೊಳಿಸದೆ ಇದ್ದಲ್ಲಿ, ಅದು ಲೋಪವಾಗುತ್ತದೆ.

4. ಮಂತ್ರಾಲಯದವರು ಕರಡು ಕರಾವಳಿ ನಿರ್ವಹಣಾ ವಲಯ ಅಧಿಸೂಚನೆ, 2008ರ ಬಗ್ಗೆ ಸ್ಥಳೀಯ ಸಮುದಾಯಗಳು ಮತ್ತು ಸರ್ಕಾರೇತರ ಸಂಸ್ಥೆಗಳ ಟೀಕೆ ಟಿಪ್ಪಣಿಗಳನ್ನು ಸಂಗ್ರಹಿಸುವ ಕಾರ್ಯವನ್ನು ಪರಿಸರ ಶಿಕ್ಷಣ ಕೇಂದ್ರ, (ಸಿಇಇ) ಅಹಮದಾಬಾದ್ ಅವರಿಗೆ ವಹಿಸಿಕೊಟ್ಟಿತ್ತು.

5. ಮಂತ್ರಾಲಯದವರು ಕರಡು ಸಿಎಂಜೆಡ್ ಅಧಿಸೂಚನೆ ಕುರಿತು ಹಲವಾರು ಸಲಹೆಗಳು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಿದೆ. ಅಲ್ಲದೆ, ಸಿಇಇ ಸಂಸ್ಥೆಯವರು ವಿವಿಧ ಕರಾವಳಿ ರಾಜ್ಯಗಳಲ್ಲಿ ಇರುವ ಸ್ಥಳೀಯ ಸಮುದಾಯಗಳ ಜೊತೆಯಲ್ಲಿ ಸಮಾಲೋಚಿಸಿ ಅಂದರೆ ಎಲ್ಲಾ ಕರಾವಳಿ ರಾಜ್ಯಗಳಲ್ಲಿ 35 ಸಭೆಗಳು ನಡೆಸಿ ಅದರಲ್ಲಿ ಭಾಗವಹಿಸಿದ ಸುಮಾರು 4,000 ಜನರೊಂದಿಗೆ ಸಮಾಲೋಚಿಸಿ ಅದರ ಆಧಾರದ ಮೇಲೆ ರಚಿಸಿದ ವರದಿಯನ್ನು ಸಲ್ಲಿಸಿದೆ.

6. ಇಷ್ಟೇ ಅಲ್ಲದೆ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಅರಣ್ಯಗಳ ಸಂಸದೀಯ ಸಮಿತಿಯು ಸಹ ನವೆಂಬರ್ – ಡಿಸೆಂಬರ್ 2008 ರಲ್ಲಿ ಕರಡು ಕರಾವಳಿ ನಿರ್ವಹಣಾ ವಲಯ ಅಧಿಸೂಚನೆ, 2008 ರ ಪರಿಣಾಮಗಳನ್ನು ಸಹ ಪರಿಶೀಲಿಸಿ ನೋಡಿದೆ. ಸಂಸದೀಯ ಸಮಿತಿಯ ವರದಿಯು 2009 ರ ಮಾರ್ಚ್ ರಂದು ಮಂತ್ರಾಲಯದ ಕೈಸೇರಿದೆ.

7. ಸಂಸದೀಯ ಸಮಿತಿಯ ಶಿಫಾರಸ್ಸುಗಳು ಸೇರಿದಂತೆ, ಈ ಸಲಹೆಗಳು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿ ನೋಡಲು ಮತ್ತು ರಾಷ್ಟ್ರಕ್ಕಾಗಿ ಒಂದು ಕರಾವಳಿ ವಲಯ ನಿರ್ವಹಣಾ ಕಾರ್ಯವಿಧಾನವನ್ನು ರೂಪಿಸಲು ಮಂತ್ರಾಲಯವು 15-6-2009 ರಂದು ಪ್ರೊ: ಎಂ.ಎಸ್.ಸ್ವಾಮಿನಾಥನ್ ಅವರ ಅಧ್ಯಕ್ಷತೆಯಲ್ಲಿ 4 ಜನ ಸದಸ್ಯರನ್ನುಳ್ಳ ಒಂದು ತಜ್ಞರ ಸಮಿತಿಯನ್ನು ರಚಿಸಿತು. ಸದರಿ ಸಮಿತಿಗೆ ವಹಿಸಿಕೊಟ್ಟ ಪರಿಶೀಲನಾಂಶಗಳು ಹೀಗಿವೆ: (1) ಕರಡು ಕರಾವಳಿ ನಿರ್ವಹಣಾ ವಲಯ ಅಧಿಸೂಚನೆ, 2008 ರ ಬಗ್ಗೆ ಮಂತ್ರಾಲಯವು ಸ್ವೀಕರಿಸಿದ ಟೀಕು-ಟಿಪ್ಪಣಿಗಳನ್ನು ಪರಿಶೀಲಿಸಿ ನೋಡುವುದು ಮತ್ತು (2) ಸಮಗ್ರ ಕರಾವಳಿ ವಲಯ ನಿರ್ವಹಣೆಗಾಗಿ ಕಾರ್ಯನೀತಿ ಮತ್ತು ಕಾನೂನು ಚೌಕಟ್ಟನ್ನು ಸಲಹೆ ಮಾಡುವುದು. ಸಮಿತಿಯವರು ಕರಡು ಕರಾವಳಿ ನಿರ್ವಹಣಾ ವಲಯ ಅಧಿಸೂಚನೆ, 2008 ರ ಬಗ್ಗೆ ಪರಿಸರ ಮತ್ತು ಅರಣ್ಯಗಳ ಮಂತ್ರಾಲಯದವರು ಸ್ವೀಕರಿಸಿದ ಟೀಕೆ-ಟಿಪ್ಪಣಿಗಳನ್ನು ಪರಿಶೀಲಿಸಿ ನೋಡಿತು ಮತ್ತು ಕರಡು ಕರಾವಳಿ ನಿರ್ವಹಣಾ ವಲಯ ಅಧಿಸೂಚನೆ, 2008ರ ಬಗ್ಗೆ ಪರಿಸರ ಮತ್ತು ಅರಣ್ಯಗಳ ಮಂತ್ರಾಲಯಕ್ಕೆ ತಮ್ಮ ಟೀಕೆಗಳನ್ನು ಕಳುಹಿಸಿಕೊಟ್ಟಂಥ ವಿವಿಧ ಗುಂಪುಗಳ

ಪ್ರತಿನಿಧಿಗಳ ಜೊತೆಯಲ್ಲಿ 5 ಸಭೆಗಳನ್ನು ನಡೆಸಿತು. ಸದರಿ ಸಭೆಗಳ ವಿವರಗಳು ಈ ಮುಂದಿನಂತಿವೆ:-

- ಜೂನ್ 27, 2009 - ಕರಾವಳಿ ನಿಯಂತ್ರಣಾ ವಲಯ (ಸಿಆರ್‌ಜೆಡ್) ಮತ್ತು ಕರಾವಳಿ ನಿರ್ವಹಣಾ ವಲಯ (ಸಿಎಂಜೆಡ್) ಇವುಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಚರ್ಚಿಸುವುದು.
- ಜುಲೈ 7, 2009 - ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪ್ರತಿನಿಧಿಗಳೊಂದಿಗೆ ಭೇಟಿ.
- ಜುಲೈ 8, 2009 - ವಾಣಿಜ್ಯ ಮತ್ತು ಕೈಗಾರಿಕೆಗಳ ಚೇಂಬರ್ಸ್‌ನ ಪ್ರತಿನಿಧಿಗಳನ್ನು ಭೇಟಿ ಆಗುವುದು.
- ಜುಲೈ 11, 2009 - ಸರ್ಕಾರೇತರ ಸಂಸ್ಥೆಗಳು ಮತ್ತು ಮೀನುಗಾರ ಸಮುದಾಯಗಳ ಸಂಘಸಂಸ್ಥೆಗಳ ಪ್ರತಿನಿಧಿಗಳೊಡನೆ ಭೇಟಿ.
- ಜುಲೈ 16, 2009 - ವರದಿಯನ್ನು ಅಂತಿಮಗೊಳಿಸುವುದು.

8. ಸದರಿ ತಜ್ಞ ಸಮಿತಿಯು ತನ್ನ ವರದಿಯನ್ನು 16-7-2009 ರಂದು ಸಲ್ಲಿಸಿದೆ ಮತ್ತು ಮಂತ್ರಾಲಯದವರು ವರದಿಯನ್ನು ಅಂಗೀಕರಿಸಿದ್ದಾರೆ. ಮೇಲ್ಕಂಡ ತಜ್ಞ ಸಮಿತಿಯವರು ಈ ಮುಂದಿನಂತೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿರುತ್ತಾರೆ:-

- ಸಿಎಂಜೆಡ್ ಅಧಿಸೂಚನೆಗೆ ವ್ಯಾಪಕವಾದ ವಿರೋಧವಿದೆ. ಲಿಖಿತ ಟೀಕೆ ಟಿಪ್ಪಣಿಗಳನ್ನು ಸಲ್ಲಿಸಿದ ಎಲ್ಲಾ ಎಂಟು ರಾಜ್ಯ ಸರ್ಕಾರಗಳು ಸಿಎಂಜೆಡ್ 2008ನ್ನು ಹಿಂತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡಿವೆ. ಮೀನುಗಾರ ಸಂಘಸಂಸ್ಥೆಗಳು ಮತ್ತು ಸರ್ಕಾರೇತರ ಪರಿಸರ ಸಂಸ್ಥೆಗಳು ಈ ಕರಡು ಅಧಿಸೂಚನೆಯನ್ನು ತಿರಸ್ಕರಿಸಿವೆ.

- ಕರಡು ಅಧಿಸೂಚನೆಯಲ್ಲಿ ಪ್ರಸ್ತಾವಿಸಿರುವಂಥ ವೈಜ್ಞಾನಿಕ ನಿರ್ವಹಣಾ ವ್ಯವಸ್ಥೆ ತಪ್ಪು ವ್ಯಾಖ್ಯಾನಕ್ಕೆ ಮತ್ತು ದುರ್ಬಳಕೆಗೆ ಅವಕಾಶ ಮಾಡಿಕೊಡುತ್ತದೆ ಎಂಬ ವ್ಯಾಪಕ ಆತಂಕ ಎಲ್ಲೆಡೆ ಕಂಡುಬರುತ್ತಿದೆ. ಬಳಸಿರುವಂಥ ವೈಜ್ಞಾನಿಕ

ಪದಗಳಲ್ಲಿ ಒಂದು ರೀತಿಯ ಸಂದಿಗ್ಧತೆ ಇದೆ. ಎಲ್ಲಕ್ಕೂ ಮಿಗಿಲಾಗಿ ಒತ್ತುತೀರ ಪ್ರದೇಶ ರೇಖೆಯನ್ನು (setback line) ಗುರುತಿಸುವಲ್ಲಿ ಮೂಲಭೂತವಾದಂಥ ಅನಿಶ್ಚಿತತೆಯಿದೆ.

- ಎಲ್ಲಾ ಗುಂಪುಗಳಲ್ಲೂ ಇರುವಂಥ ಒಂದು ಅಭಿಪ್ರಾಯವೆಂದರೆ ಒತ್ತುತೀರ ರೇಖೆಯನ್ನು (ಸೆಟ್‌ಬ್ಯಾಕ್ ಲೈನ್) ಗುರುತಿಸುವಲ್ಲಿ ವೈಜ್ಞಾನಿಕ ಮತ್ತು ದತ್ತಾಂಶ ಸಮಸ್ಯೆಗಳಿವೆ ಮತ್ತು ಇದರಿಂದ ಅನುಷ್ಠಾನದಲ್ಲಿ ವಿಳಂಬವುಂಟಾಗುತ್ತದೆ.

- ಇನ್ನೊಂದು ಅಂಶವೇನೆಂದರೆ ಸೆಟ್‌ಬ್ಯಾಕ್ ರೇಖೆಯನ್ನು ಗುರುತಿಸಿ ರೇಖಿಸುವ ಸಮಯ ಮತ್ತು ಸಮಗ್ರ ಕರಾವಳಿ ವಲಯ ನಿರ್ವಹಣಾ ಯೋಜನೆಯನ್ನು ರೂಪಿಸಿ ಕೇಂದ್ರ ಸರ್ಕಾರವು ಅದನ್ನು ಅಂತಿಮ ಗೊಳಿಸುವ ಸಮಯ ಇವೆರಡರ ನಡುವೆ ಕೆಲವು ಹಿತಾಸಕ್ತಿಯುಳ್ಳ ಪಕ್ಷಕಾರರು ಬಹಳ ಸಕ್ರಿಯವಾಗಿ ಕಾರ್ಯಪ್ರವೃತ್ತರಾಗುವ ಭಯವಿದೆ.

- ಕರಡು ಅಧಿಸೂಚನೆಯಲ್ಲಿ ಮೀನುಗಾರರ ಜೀವನೋಪಾಯ ಹಕ್ಕು ಗಳನ್ನು ಸಂಪೂರ್ಣ ಕಡೆಗಣಿಸಲಾಗಿದೆ ಎಂದು ಸಹ ತಿಳಿಸಲಾಗಿದೆ. ಊರ್ಜಿತವಾಗುವಂಥ ಕರಾವಳಿ ವಲಯ ನಿರ್ವಹಣೆಗಾಗಿ ರಾಷ್ಟ್ರೀಯ ಮಂಡಳಿಯಲ್ಲಿ ಪ್ರಸಕ್ತ 32 ಸದಸ್ಯರಿರಬೇಕೆಂದು ಪ್ರಸ್ತಾವಿಸಲಾಗಿದೆ. ಅನೇಕ ಏಜೆನ್ಸಿಗಳು ತಮ್ಮ ಪ್ರತಿನಿಧಿಗಳನ್ನೂ ಆ ಮಂಡಳಿಯಲ್ಲಿ ಸೇರಿಸಬೇಕೆಂದು ಕೇಳಿಕೊಂಡಿದ್ದಾರೆ. ಕರಡು ಅಧಿಸೂಚನೆ ಸಂಬಂಧದಲ್ಲಿ ಅನೇಕ ಸಮಸ್ಯೆಗಳನ್ನು ಕೆಲವು ಗುಂಪುಗಳು ವ್ಯಕ್ತಪಡಿಸಿದ್ದರೂ ಅವುಗಳಲ್ಲಿ ಅನೇಕ ಗುಂಪುಗಳು ಈಗಿರುವ ಸಿಆರ್‌ಜೆಡ್ ವ್ಯವಸ್ಥೆಯಲ್ಲೂ ಇರುವ ಸಮಸ್ಯೆಯನ್ನು ಬೊಟ್ಟುಮಾಡಿ ತೋರಿಸಿವೆ ಮತ್ತು ಸಿಆರ್‌ಜೆಡ್ ಅಧಿಸೂಚನೆಯಲ್ಲಿ ತಿದ್ದುಪಡಿಗಳನ್ನು ಮಾಡಬೇಕೆಂದು ಸಹ ಕೇಳಿಕೊಂಡಿವೆ. ಈಗಿರುವ ಜಾರಿ ವ್ಯವಸ್ಥೆ ಬಹಳ ದುರ್ಬಲವಾದುದು ಮತ್ತು ಉಲ್ಲಂಘನೆಗಳು ಸರ್ವೇ ಸಾಮಾನ್ಯವಾಗಿವೆ ಎಂಬುದನ್ನು ಬೊಟ್ಟುಮಾಡಿ ತೋರಿಸಿದ್ದಾರೆ.

ಸಮಿತಿಯು ಈ ಮುಂದಿನಂತೆ ಶಿಫಾರಸ್ಸು ಮಾಡಿದೆ:–

**(ಎ) ಸುಧಾರಿತ ಬಾಹ್ಯಾಕಾಶ ತಂತ್ರಜ್ಞಾನ ಬೆಂಬಲಿತ ಜಾರಿ ಪದ್ಧತಿ, ಸದೃಢಗೊಳಿಸಿದ ಸಂಸ್ಥೆಗಳು ಮತ್ತು ನಿಯಂತ್ರಕ ಹಾಗೂ ಕಾನೂನು ಸುಧಾರಣೆಗಳ ಮೂಲಕ ಸಿಆರ್‌ಜೆಡ್‌ನ ಉಲ್ಲಂಘನೆಯನ್ನು ತಡೆಯುವುದು.**

- ಕಡಲತೀರಗಳ ನಕಾಶೆ ತಯಾರಿಸಲು ಮತ್ತು ವಾಸ್ತವವಾಗಿ ನಡೆಯುತ್ತಿರುವಂಥ ಉಲ್ಲಂಘನೆಗಳನ್ನು ಗುರುತಿಸಿ ತಡೆಯಲು ಉಪಗ್ರಹ ಮತ್ತು ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದು. ಅರಣ್ಯ ಮತ್ತು ಪರಿಸರ ಮಂತ್ರಾಲಯದವರು ಕಡಲತೀರಗಳ ನಕಾಶೆಯನ್ನು ತಯಾರಿಸಲು ಒಂದು ರಾಷ್ಟ್ರಮಟ್ಟದ ಕಾರ್ಯಕ್ರಮವನ್ನು ಪ್ರಾರಂಭಿಸಬೇಕು ಮತ್ತು ಕಡಲತೀರದಲ್ಲಿ ಬದಲಾವಣೆಗಳು/ಉಲ್ಲಂಘನೆಗಳು ನಡೆದಾಗಲ್ಲೆಲ್ಲಾ ಅದನ್ನು ಪ್ರಾಧಿಕಾರಿಗಳಿಗೆ ತಿಳಿಸುವಂಥ ತಂತ್ರಜ್ಞಾನವನ್ನು ಬೆಳೆಸಬೇಕು ಎಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

- ವಿವಿಧ ವಿನಿಯಮಗಳ ಅಡಿಯಲ್ಲಿ ಅಂತಿಮ ಅನುಮೋದನೆ ಕಾರ್ಯವಿಧಾನವನ್ನು ಸರಳಗೊಳಿಸಬೇಕಾದಂಥ ಅಗತ್ಯತೆ ಇದೆ; ಹೀಗಿದ್ದರೂ, ಜೀವಿಪರಿಸರದ ಸಮಗ್ರತೆಯನ್ನು ರಕ್ಷಿಸಿಕೊಂಡು ಬರಲು ಹೆಚ್ಚಿನ ದಕ್ಷತೆ ಹಾಗೂ ನಿಷ್ಠುರತೆ ಇರಬೇಕು. ಈಗಿರುವಂತೆ ರಾಜ್ಯ ಪ್ರಾಧಿಕಾರಗಳು, ಅನೇಕ ಸಂದರ್ಭಗಳಲ್ಲಿ ಪರಿಸರ ಇಲಾಖೆಯ ಕಾರ್ಯದರ್ಶಿಗಳು ಮುಖ್ಯಸ್ಥರಾಗಿರುವಂಥ ಪ್ರಾಧಿಕಾರಗಳು, ಯೋಜನೆಗಳ ಅಂತಿಮ ಅನುಮೋದನೆಗೆ ಸಂಬಂಧಿಸಿದ ಚರ್ಚೆಗಳಲ್ಲೇ ತಮ್ಮನ್ನು ಪ್ರಮುಖವಾಗಿ ತೊಡಗಿಸಿಕೊಂಡಿರುತ್ತಾರೆ. ಹೀಗಾಗಿ ಅವರಿಗೆ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಅಡಿಯಲ್ಲಿ ಪ್ರಾಧಿಕಾರಗಳನ್ನು ರಚಿಸುವುದರ ಹಿಂದಿನ ಪ್ರಮುಖ ಉದ್ದೇಶವಾದ ವಿನಿಯಮಗಳನ್ನು ಜಾರಿಗೆ ತರುವ ಕಾರ್ಯಕ್ಕೆ ಸಮಯಾವಕಾಶವೇ ಇರುವುದಿಲ್ಲ.

- ರಾಜ್ಯ ಕರಾವಳಿ ವಲಯ ನಿರ್ವಹಣಾ ಪ್ರಾಧಿಕಾರಗಳಲ್ಲಿ ಸಾಮರ್ಥ್ಯವರ್ಧನೆ ಮಾಡಬೇಕು. ಅದರಲ್ಲೂ ಅವರು ಉತ್ತಮವಾಗಿ ನಿರ್ಣಯಗಳನ್ನು ತೆಗೆದುಕೊಳ್ಳಲು ಮಾಹಿತಿ ಸಂಪನ್ಮೂಲಗಳನ್ನು ರಚಿಸಬೇಕು. ಇಐಎ ಅನುಮೋದನೆಯೊಂದಿಗೆ ಸಿಆರ್‌ಜೆಡ್ ಮತ್ತು ಅದರ ಸಂಪರ್ಕಗಳಿಗೆ ಸಂಬಂಧಪಟ್ಟ ಎಲ್ಲಾ ಅನುಮೋದನೆಗಳನ್ನು ಪ್ರಕಟಿಸಲು ಅಂತರ್ಜಾಲ ಬೆಂಬಲಿತ ವ್ಯವಸ್ಥೆಗಳನ್ನು ಬಳಸಿಕೊಳ್ಳಬೇಕು.

- 1986ರ ಪರಿಸರ ಸಂರಕ್ಷಣಾ ಅಧಿನಿಯಮವನ್ನು ಇನ್ನೂ ಚೆನ್ನಾಗಿ ಪಾಲಿಸುವಂತೆ ನೋಡಿಕೊಳ್ಳಲು ಸದರಿ ಅಧಿನಿಯಮಕ್ಕೆ ಬದಲಾವಣೆ ತರುವುದು. ಈಗಿರುವಂತೆ ಪರಿಸರ ಸಂರಕ್ಷಣಾ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ನಡೆದ ಉಲ್ಲಂಘನೆಗಳು (21 ಮತ್ತು 22ನೇ ಪ್ರಕರಣಗಳು) ಸಂಜ್ಞೇಯ ಅಪರಾಧವಲ್ಲ ಮತ್ತು ಜಾಮೀನು ಪಡೆದುಕೊಳ್ಳಬಹುದಾದಂಥದ್ದಾಗಿರುತ್ತದೆ. ಇದರಿಂದ ವಿಳಂಬಗಳು ಉಂಟಾಗುತ್ತದೆ ಮತ್ತು ಯಶಸ್ವಿ ಜಾರಿಗೆ ಅಡ್ಡಿಯುಂಟಾಗುತ್ತದೆ.

**(ಬಿ) ಸಿ.ಆರ್.ಜೆಡ್ ಗೆ ತಿದ್ದುಪಡಿಗಳನ್ನು ಮಾಡಿ ಮೀನುಗಾರ ಸಂಘಗಳಿಗೆ ಅವರ ವಾಸಸ್ಥಳ ಮತ್ತು ಜೀವನೋಪಾಯದ ಭದ್ರತೆ ಒದಗಿಸುವಂತೆ ಸಂರಕ್ಷಣೆಗಳನ್ನು ಹೆಚ್ಚಿಸುವುದು.**

ಸಿ.ಆರ್.ಜೆಡ್ 3ರಲ್ಲಿರುವ ಮೀನುಗಾರರ ವಾಸಗೃಹ ಘಟಕಗಳಿಗೆ ಸಂಬಂಧಿಸಿದಂತೆ, ಶಿಫಾರಸ್ಸುಗಳು:

- 1991ರ ಸಿಆರ್‌ಜೆಡ್ ಅಧಿಸೂಚನೆ ಪ್ರಕಾರ (ಮೀನುಗಾರರ ಕುಟುಂಬಗಳು ಸೇರಿ) ಗ್ರಾಮೀಣ ಸಮುದಾಯಗಳು ವಾಸಿಸುವಂಥ ಪ್ರದೇಶವನ್ನು ಸಿ.ಆರ್.ಜೆಡ್.3 ಎಂದು ಕರೆಯಲಾಗಿದೆ. ಈ ವಲಯದಲ್ಲಿ ಉಬ್ಬರದ ರೇಖೆಯಿಂದ 200 ಮೀಟರುಗಳವರೆಗಿನ ಪ್ರದೇಶವನ್ನು ಅಭಿವೃದ್ಧಿರಾಹಿತ್ಯ ವಲಯ ಎಂದು ಕರೆಯಲಾಗಿದೆ. ಈ ವಲಯದಲ್ಲಿ ಈಗಿರುವ ಅಧಿಕೃತ ಕಟ್ಟಡಗಳಿಗೆ ಈಗಿರುವಂಥ ಮಹಡಿ ವಿಸ್ತೀರ್ಣ ಸೂಚಿಯನ್ನು (FSI) ಮೀರದಂತೆ ಮತ್ತು ಈಗಿರುವ ಪ್ಲಿಂತ್ ಏರಿಯಾವನ್ನು ಮೀರದಂತೆ ಮತ್ತು

ಈಗಿರುವ ಜನಸಾಂದ್ರತೆ (1991ರ ಮಟ್ಟಕ್ಕೆ ಸ್ಥಂಭೀಕರಿಸಿ) ಮೀರದಂತೆ ಅವುಗಳಿಗೆ ರಿಪೇರಿ ಮಾಡುವುದನ್ನು ಬಿಟ್ಟು ಇನ್ನಾವುದೇ ಕಟ್ಟಡ ನಿರ್ಮಾಣಕ್ಕೆ ಈ ವಲಯದಲ್ಲಿ ಅವಕಾಶ ನೀಡಲಾಗುವುದಿಲ್ಲ. ಕೃಷಿ, ತೋಟಗಾರಿಕೆ, ತೋಟಗಳು, ಹುಲ್ಲುಗಾವಲುಗಳು, ಪಾರ್ಕುಗಳು, ಆಟದ ಮೈದಾನುಗಳು ಮತ್ತು ಅರಣ್ಯ ನಿರ್ಮಾಣ ಇವುಗಳಿಗೆ ಈ ಅಭಿವೃದ್ಧಿರಾಹಿತ್ಯ ವಲಯದಲ್ಲಿ ಅವಕಾಶ ನೀಡಲಾಗುವುದು. ಅಷ್ಟೇ ಅಲ್ಲದೆ, ಉಬ್ಬರ ರೇಖೆಯಿಂದ 200 ರಿಂದ 500 ಮೀಟರುವರೆಗಿನ ಪ್ರದೇಶಗಳಲ್ಲಿ ವಾಸಗೃಹಗಳನ್ನು ಕಟ್ಟುವುದಕ್ಕೆ/ಪುನ: ಕಟ್ಟುವುದಕ್ಕೆ ಅದು ಈಗಿರುವ ಮೀನುಗಾರ ಹಳ್ಳಿಗಳು ಮತ್ತು ಗ್ರಾಮಠಾಣಗಳಂಥ ಸಾಂಪ್ರದಾಯಿಕ ಹಕ್ಕುಗಳು ಮತ್ತು ರೂಢಿಗತ ಬಳಕೆಗಳ ವ್ಯಾಪ್ತಿಯಲ್ಲಿ ಬರುವಷ್ಟರ ಮಟ್ಟಿಗೆ ಅವಕಾಶ ನೀಡಲಾಗುವುದು. ಈ ನಿರ್ಮಾಣ ಮತ್ತು ಪುನರ್‌ನಿರ್ಮಾಣವು ಕೆಲವೊಂದು ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಈ ವಲಯದಲ್ಲಿ ಸ್ಥಳೀಯ ಸಮುದಾಯಗಳಿಗೆ ಸಾರ್ವಜನಿಕ ಮಳೆ ಶೆಲ್ಟರ್‌ಗಳು, ಸಮುದಾಯ ಶೌಚಾಲಯಗಳು, ನೀರು ಸರಬರಾಜು, ಶಾಲೆಗಳು, ಚಿಕಿತ್ಸಾಲಯಗಳು ಮುಂತಾದವುಗಳ ನಿರ್ಮಾಣಕ್ಕೆ ಅವಕಾಶ ನೀಡಲಾಗಿದೆ. 1991ರ ಮಹಡಿ ವಿಸ್ತೀರ್ಣ ಸೂಚಿ (FSI) ಆಧರಿಸಿ ವಾಸಗೃಹಗಳ ಅಭಿವೃದ್ಧಿಯನ್ನು ನಿರ್ಬಂಧಗೊಳಿಸಿರುವ ಸಮಸ್ಯೆಯನ್ನು (ಅಂದರೆ 9 ಮೀಟರುಗಳ ಎತ್ತರಕ್ಕೆ ಒಳಪಟ್ಟು ಒಂದು ಮಹಡಿ+ಎರಡು ಮಹಡಿಗೆ ನಿರ್ಬಂಧಿಸಿರುವುದು) ಮೀನುಗಾರ ಸಂಸ್ಥೆಗಳು ಎತ್ತಿವೆ. ದಿನೇ ದಿನೇ ಬೆಳೆಯುತ್ತಿರುವ ಕುಟುಂಬಗಳ ಅವಶ್ಯಕತೆಗೆ ಸರಿಹೋಗುವಂತೆ ಅವರು ಇನ್ನೂ ಹೆಚ್ಚಿನ ಮಹಡಿ ವಿಸ್ತೀರ್ಣ ಸೂಚಿಯನ್ನು ನಿಗದಿಪಡಿಸಬೇಕೆಂದು ಇಚ್ಛಿಸುತ್ತಾರೆ. ಇದು ಸಮರ್ಥನೀಯವಾದ ಎಂದು ಅನಿಸುತ್ತದೆ. ಹೀಗಿದ್ದರೂ, ಯಾವುದೇ ಬದಲಾವಣೆಗಳನ್ನು ಮಾಡಿದ್ದರೂ ಈ ಬೆಲೆ ಬಾಳುವ ಆಸ್ತಿಗಳ ಒಡೆತನವನ್ನು ಮತ್ತು ಬಳಕೆಯನ್ನು ಮೀನುಗಾರ ಸಂಸ್ಥೆಯವರೇ ನಿರಂತರವಾಗಿ ಅನುಭೋಗಿಸುವಂತೆ ನೋಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಆದ್ದರಿಂದ, ಸಮಿತಿಯು, <u>ಸರ್ಕಾರವು ಈ ವಿಷಯವನ್ನು ಕುರಿತು ಚರ್ಚೆಗಳನ್ನು ನಡೆಸಿ ಮಾಲೀಕತ್ವ ಮತ್ತು ಬಳಕೆಯ ಬಗ್ಗೆ ನಿರ್ಬಂಧಗಳನ್ನು ಹೇರಿ ವಲಯ 3 ರಲ್ಲಿ ಮಹಡಿ ವಿಸ್ತೀರ್ಣ ಸೂಚಿಯನ್ನು ಹೆಚ್ಚಿಸುವ ಬಗ್ಗೆ ಚೆನ್ನಾಗಿ ಪರ್ಯಾಲೋಚಿಸಿ ನಿರ್ಧಾರವನ್ನು ತೆಗೆದುಕೊಳ್ಳಬೇಕೆಂದು ಶಿಫಾರಸ್ಸು ಮಾಡುತ್ತದೆ.</u>

ಜೀವನೋಪಾಯ ಆಧಾರಿತ ಚಟುವಟಿಕೆಗಳನ್ನು ಸೇರಿಸುವುದಕ್ಕೆ ಸಂಬಂಧಪಟ್ಟ ಶಿಫಾರಸ್ಸುಗಳು:

- ಸಿಆರ್‌ಜೆಡ್ ಅಧಿಸೂಚನೆ 1991ರಲ್ಲಿ ಮೀನುಗಾರ ಕುಟುಂಬಗಳ ಜೀವನೋಪಾಯದ ಅಗತ್ಯಗಳು ಅಂದರೆ ಅವರ ವೃತ್ತಿಯಾದ ಮೀನುಗಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಕುರಿತು ಸ್ಪಷ್ಟವಾಗಿ ಏನನ್ನೂ ಹೇಳಿಲ್ಲ ಎಂದು ಗುರುತಿಸಿರುತ್ತಾರೆ. ಇದರ ಪರಿಣಾಮವಾಗಿ ಅನೇಕ ಬಾರಿ ಮೀನುಗಾರ ಸಮುದಾಯದವರು ತಮ್ಮ ನೈಜ ಅಗತ್ಯತೆಗಳನ್ನು ಕಡೆಗಾಣಿಸಲಾಗಿದೆ ಎಂಬ ಬೇಡಿಕೆಯನ್ನು ಮುಂದಿಟ್ಟಿರುತ್ತಾರೆ. ಈಗಿರುವಂತೆ 1991ರ ಸಿಆರ್‌ಜೆಡ್‌ನಲ್ಲಿ ಸಾಂಪ್ರದಾಯಿಕ ಮೀನುಗಾರರ ವೃತ್ತಿಗೆ ಸಂಬಂಧಪಟ್ಟಂಥ – ಮೀನು ಒಣಗಿಸುವುದು, ಹರಾಜು ಹಾಲ್‌ಗಳು, ಬಲೆಯನ್ನು ರಿಪೇರಿ ಮಾಡುವಂಥ ಸ್ಥಳಗಳು ಮುಂತಾದ ಚಟುವಟಿಕೆಗಳನ್ನು ಕುರಿತು ಏನನ್ನೂ ವ್ಯಕ್ತವಾಗಿ ಹೇಳಿರುವುದಿಲ್ಲ. ಇದು ಮೀನುಗಾರ ಕುಟುಂಬ ಗಳ ಮೇಲೆ ಪರಿಣಾಮ ಬೀರುವಂಥ ಒಂದು ಗಂಭೀರತರ ಲೋಪವಾಗಿದೆ. ಆದ್ದರಿಂದ ಸಮಿತಿಯು 1991ರ ಸಿಆರ್‌ಜೆಡ್ ಅಧಿಸೂಚನೆಯು ಅಂಥ ಚಟುವಟಿಕೆಗಳ ಪಟ್ಟಿಯನ್ನು ಪರಿಶೀಲಿಸಿ ನೋಡಿ ವಲಯ 2 ಮತ್ತು 3 ರಲ್ಲಿ ಅನುಮತಿಸಬಹುದಾದಂಥ ಚಟುವಟಿಕೆಗಳಲ್ಲಿ ಅವುಗಳನ್ನು ಸೇರಿಸಬೇಕೆಂದು ಶಿಫಾರಸ್ಸು ಮಾಡುತ್ತದೆ. ಈ ಪಟ್ಟಿಯನ್ನು ಬಹಳ ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಿ ಅದರ ದುರ್ಬಳಕೆ ಆಗದಂತೆ ನೋಡಿಕೊಳ್ಳ ಬೇಕಾಗುತ್ತದೆ. ಉದಾಹರಣೆಗೆ ಅನುಮತಿಸಬಹುದಾದಂಥ ಚಟುವಟಿಕೆಗಳಲ್ಲಿ "ಮೀನು ಸಂಸ್ಕರಣ ಘಟಕಗಳು" ಎಂಬುದನ್ನು ಸೇರಿಸಬೇಕೆಂದು ಸಹ ವಾದಿಸಲಾಗಿದೆ. ಆದರೆ, ಅಂಥ ಘಟಕಗಳು ಬೃಹತ್ ಪ್ರಮಾಣದ್ದಾಗಿದ್ದು ಪರಿಸರ ಮಾಲಿನ್ಯವನ್ನುಂಟು ಮಾಡಬಲ್ಲವು ಹಾಗೂ ಮೀನುಗಾರರಲ್ಲದವರು ಅದರ ಮಾಲೀಕತ್ವ ಹೊಂದುವಂಥ ಸಾಧ್ಯತೆಯಿದೆ.

- ಸಿಆರ್‌ಜೆಡ್ 3 ಇದರ ಅಭಿವೃದ್ಧಿರಾಹಿತ್ಯ ವಲಯದಲ್ಲಿ (0 ಯಿಂದ 200 ಮೀಟರುಗಳು) ಮೀನುಗಾರರಿಗೆ ಮನೆ ಕಟ್ಟಿಕೊಳ್ಳಲು ಅವಕಾಶ ನೀಡಿದ್ದರೂ

ಪ್ರವಾಸೋದ್ಯಮದಂಥ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ ನೀಡಿಲ್ಲ. ಮೀನುಗಾರರ ಮಾಲೀಕತ್ವದಲ್ಲಿ ಇಂಥ ಚಟುವಟಿಕೆಗಳಿಗೆ ಅವಕಾಶ ಕೊಡಬೇಕೆಂದು ಬಲವಾದ ಬೇಡಿಕೆಯಿದೆ. ಈ ಬೇಡಿಕೆ ಎಷ್ಟೇ ನ್ಯಾಯಯುತವಾದರೂ ಇದರಿಂದ ಈ ವಲಯದೊಳಗೆ ಪ್ರವಾಸೋದ್ಯಮ ಘಟಕಗಳು ನುಸುಳುವ ಸಾಧ್ಯತೆಯಿದೆ. ಮತ್ತು ಅವುಗಳ ಗಾತ್ರ, ಪರಿಣಾಮ ಅಥವಾ ಮಾಲೀಕತ್ವದ ದೃಷ್ಟಿಕೋನದಿಂದ ಅವುಗಳನ್ನು ನಿಯಂತ್ರಿಸುವುದು ಕಷ್ಟವಾಗಬಹುದು. ಆದುದರಿಂದ, ಈ ಮಾರ್ಪಾಡನ್ನು ಸರ್ಕಾರ ಪರಿಗಣಿಸಿದರೆ, ಬಹಳ ಎಚ್ಚರದಿಂದ ಇದನ್ನು ಕುರಿತು ವ್ಯವಹರಿಸಬೇಕು ಎಂಬ ಅಭಿಪ್ರಾಯವನ್ನು ಸಮಿತಿಯು ವ್ಯಕ್ತಪಡಿಸುತ್ತದೆ.

ಮೀನುಗಾರರ ಹಕ್ಕುಗಳ ಸಂಬಂಧದಲ್ಲಿ ಶಾಸನವನ್ನು ತರುವ ಬಗ್ಗೆ ಶಿಫಾರಸ್ಸುಗಳು:

- ಈ ಸಮಿತಿಯು ಅಭಿವೃದ್ಧಿ ಯೋಜನೆಯಿಂದಾಗಿ ತಮ್ಮ ಜೀವನೋಪಾಯ ಮತ್ತು ಮನೆ ಗಳನ್ನು ಕಳೆದುಕೊಂಡಿರುವ ಬಗ್ಗೆ ಮೀನುಗಾರರ ಸಾಕ್ಷಿ ಹೇಳಿಕೆ ಗಳನ್ನು ಕೇಳಿತು. ಉದಾಹರಣೆಗೆ ಮುಂಬೈನ ವರ್ಸೋವದಲ್ಲಿ, ಆಂಧ್ರಪ್ರದೇಶ ತೀರದ ಮಚಲಿಪಟ್ಟಣದಲ್ಲಿ ಮತ್ತು ಗುಜರಾತ್‌ನ ಮುಂಡ್ರದಲ್ಲಿ ಭಾರಿ ಅಭಿವೃದ್ಧಿ ಚಟುವಟಿಕೆಗಳಿಂದಾಗಿ ಅಂದರೆ ಗೃಹನಿರ್ಮಾಣದಿಂದ ಬಂದರು ನಿರ್ಮಾಣದವರೆಗೆ ಚಟುವಟಿಕೆಗಳಿಂದ ಮೀನುಗಾರರ ವಾಸಸ್ಥಳಗಳು ಅತಿಕ್ರಮಣವಾಗಿದೆ ಹಾಗೂ ಅವರ ಜೀವನೋಪಾಯಕ್ಕೆ ಧಕ್ಕೆ ಒದಗಿದೆ. ಮೀನುಗಾರರು ದೊಡ್ಡ ದೊಡ್ಡ ನಿಗಮಗಳು ಮತ್ತು ಕಟ್ಟಡದ ಕರಾರುದಾರರುಗಳ ವಿರುದ್ಧ ತಾವು ಎಷ್ಟು ದೀರ್ಘವಾದ ಮತ್ತು ಅತಿ ಕಷ್ಟವಾದ ಹೋರಾಟವನ್ನು ನಡೆಸಬೇಕಾಯಿತು ಎಂಬುದನ್ನು ವಿವರಿಸಿದರು. ಈ ಸಮಿತಿಯು ಸಿಎಂಜೆಡ್‌ನ್ನು ಪರಿಶೀಲಿಸಿ ನೋಡುತ್ತಿರುವ ಸಂಸದೀಯ ಸಮಿತಿಗೆ ಪ್ರೊ: ಎಂ.ಎಸ್. ಸ್ವಾಮಿನಾಥನ್ ಅವರು ಮಾಡಿದ ಶಿಫಾರಸ್ಸುಗಳನ್ನು ಬೆಂಬಲಿಸುತ್ತದೆ. ಸದರಿ ಶಿಫಾರಸ್ಸಿನ ಪ್ರಕಾರ ಸಂಬಂಧಪಟ್ಟ ಕೇಂದ್ರ ಸರ್ಕಾರದ ಮಂತ್ರಾಲಯದವರು ಪರಂಪರಾಗತವಾಗಿ ಮೀನುಗಾರಿಕೆಯಲ್ಲಿ ನಿರತರಾದ ಕುಟುಂಬಗಳಿಗೆ ಭದ್ರತೆಯನ್ನು ಒದಗಿಸುವುದಕ್ಕಾಗಿ ಪರಂಪರಾಗತ ಅರಣ್ಯ

ವಾಸಿಗಳ ಅಧಿನಿಯಮ, 2006ರ ರೀತಿಯಲ್ಲಿಯೇ ಒಂದು ಪ್ರತ್ಯೇಕ ಶಾಸನವನ್ನು ತರುವ ಬಗ್ಗೆ ಆಲೋಚಿಸಬೇಕಾದ ಅಗತ್ಯವಿದೆಯೆಂದು ಹೇಳಿದೆ.

**(ಸಿ) ಸ್ಥಳ ನಿರ್ದಿಷ್ಟ ತಿದ್ದುಪಡಿಗಳನ್ನು ಆಧರಿಸಿ ಮುಂಬೈನ ಅಭಿವೃದ್ಧಿ ಮತ್ತು ಮರು ಅಭಿವೃದ್ಧಿಯ ಸಂಬಂಧದಲ್ಲಿನ ವಿವಾದಗಳನ್ನು ಪರಿಹರಿಸುವುದು.**

- ಮುಂಬೈ ಮತ್ತು ಅದರ ಈಗಿರುವ ಸೊತ್ತುಗಳನ್ನು ಮರು ಅಭಿವೃದ್ಧಿ ಮಾಡಬೇಕಾದ ಅಗತ್ಯದ ವಿಶೇಷ ಪ್ರಕರಣವನ್ನು ಸಮಿತಿಯು ಗಮನಕ್ಕೆ ತೆಗೆದುಕೊಂಡಿದೆ. ಆದರೂ ಈ ಮರು ಅಭಿವೃದ್ಧಿಯನ್ನು ನಗರದ ಕೆಲವೊಂದು ಪ್ರದೇಶಗಳಿಗೆ ನಿರ್ದಿಷ್ಟವಾಗಿ ನಡೆಸಲು ಅವಕಾಶಕೊಟ್ಟಲ್ಲಿ ಇತರ ಸಿಆರ್‌ಜೆಡ್ 2 ಪ್ರದೇಶಗಳಲ್ಲಿ ಕರಾವಳಿ ಕ್ಷೇತ್ರದಲ್ಲಿ ಅತ್ಯಂತ ಅಗತ್ಯವಾಗಿ ಬೇಕಾದಂಥ ನಿಯಂತ್ರಣಕ್ಕೆ ಧಕ್ಕೆ ಒದಗದಂತೆ ಅವನ್ನು ನಡೆಸುವುದು ಹೇಗೆ ಸಾಧ್ಯ ಎಂಬುದು ಸಮಿತಿಗೆ ಸ್ಪಷ್ಟವಾಗುತ್ತಿಲ್ಲ. ಆದುದರಿಂದ, ಸಮಿತಿಯು ಸರ್ಕಾರವು ಈ ವಿವಾದವನ್ನು ಕುರಿತು ಬಹಳ ಎಚ್ಚರದಿಂದ ಪರಿಶೀಲಿಸಿ ನೋಡಬೇಕೆಂದು ಮತ್ತು ಕೆಲವೊಂದು ನಿರ್ದಿಷ್ಟ ಪ್ರದೇಶಗಳಲ್ಲಿ ನಿರ್ದಿಷ್ಟ ಕಟ್ಟಡಗಳ ಮರು ಅಭಿವೃದ್ಧಿಗೆ ಕೊಟ್ಟ ಅವಕಾಶವನ್ನು ನಿರ್ಬಂಧಕ್ಕೆ ಒಳಪಡಿಸುವುದನ್ನು ಮಾಡಬಹುದೆಂದು ಶಿಫಾರಸ್ಸು ಮಾಡುತ್ತದೆ.

- ಸಿಆರ್ ಜೆಡ್ ಪ್ರದೇಶಗಳಲ್ಲಿ ಖಾಸಗಿ ಅಭಿವೃದ್ಧಿದಾರರ ಕಟ್ಟಡ ನಿರ್ಮಾಣದ ಯೋಜನೆಗಳ ಬಗ್ಗೆ ತಮ್ಮ ಕಾರ್ಯನೀತಿಗಳನ್ನು ರಾಜ್ಯ ಸರ್ಕಾರಗಳು ತಪ್ಪದೇ ಮರು ಪರಿಶೀಲಿಸಬೇಕಾದ ಅಗತ್ಯವಿದೆ. ಸರ್ಕಾರವು ಗೃಹ ನಿರ್ಮಾಣಕ್ಕೆ ಸಾರ್ವಜನಿಕ ಧನ ಸಹಾಯವನ್ನು ಕುರಿತು ಯೋಚಿಸಬಹುದಾಗಿದೆ. ಹೀಗೆ ಮಾಡುವುದರಿಂದ ಈ ಅಭಿವೃದ್ಧಿಯನ್ನು ಜೀವಿ ಪರಿಸರದ ಸುರಕ್ಷತೆಯನ್ನು ಬಲಿಕೊಡದೆ ಈಗಿರುವ ಕುಟುಂಬಗಳ ಅಗತ್ಯತೆಗಳನ್ನು ಪೂರೈಸಲು ಬಳಸಿಕೊಳ್ಳಬಹುದಾಗಿದೆ.

**(ಡಿ) ಕರಾವಳಿಗಳಲ್ಲಿ ಸಮುದ್ರ ತೀರದ ರೇಖೆಗಳ ಮೇಲೆ ಪರಿಣಾಮವನ್ನುಂಟುಮಾಡುವ ಸಾಧ್ಯತೆಯಿರುವ ಬಂದರುಗಳು ಬಹುಸಂಖ್ಯೆ ಗಳಲ್ಲಿ ಬೆಳೆಯುವುದನ್ನು ಈ ಅಭಿವೃದ್ಧಿಗಳಿಂದ ಉಂಟಾಗುವ ಒಟ್ಟಾರೆ ಪರಿಣಾಮಗಳನ್ನು ಪರಿಶೀಲಿಸಿ ನೋಡಿ ಅದನ್ನು ನಿರ್ವಹಿಸಲು ವಿನಿಯಮಗಳನ್ನು ಪ್ರಾರಂಭಿಸುವುದು.**

- ಸಮಿತಿಯು ಈ ಅಭಿವೃದ್ಧಿಗಳೆಲ್ಲವೂ ಕಡಲತೀರಕ್ಕೆ ಗಂಭೀರ ಅಪಾಯವನ್ನು ತಂದೊಡ್ಡಿವೆ ಅದರಲ್ಲೂ ಸಮುದ್ರ ತೀರಗಳು ಬಾರಿ ಭೂ ಕೊರೆತಕ್ಕೆ ಈಡಾಗಿ ಸಮುದ್ರ ತೀರದ ರೇಖೆಗಳು ಎದ್ದು ಕಾಣುವಂತೆ ಬದಲಾಗುತ್ತಿವೆಯೆಂದು ಅಭಿಪ್ರಾಯ ಪಟ್ಟಿದೆ. ಬರುವ ವರ್ಷಗಳಲ್ಲಿ ಸಮುದ್ರ ತೀರದುದ್ದಕ್ಕೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಬಂದರುಗಳನ್ನು ನಿರ್ಮಿಸಲು ಉದ್ದೇಶಿಸಿರುವುದನ್ನು ನೋಡಿದರೆ ಈ ಯೋಜನೆಗಳಿಂದ ಸಮುದ್ರ ತೀರದ ಮೇಲೆ ಪುನ: ಸರಿಪಡಿಸಲಾಗದಂಥ ಪ್ರತಿಕೂಲ ಪರಿಣಾಮಗಳು ಉಂಟಾಗಲಿವೆ. ಆದುದರಿಂದ ಸಮಿತಿಯು ಈ ಮುಂದಿನಂತೆ ಶಿಫಾರಸ್ಸು ಮಾಡುತ್ತದೆ.

(i) ಸರ್ಕಾರವು ಕೂಡಲೇ ಈ ಒಂದೊಂದು ಯೋಜನೆಯಿಂದ ಸಮುದ್ರ ತೀರದ ಮೇಲೆ ಆಗುವ ಒಟ್ಟು ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡಬೇಕು. ಅದು ಆಗುವವರೆಗೂ ಈಗಿರುವ ಬಂದರುಗಳ ವಿಸ್ತರಣೆ ಕೆಲಸವಾಗಲೀ ಅಥವಾ ಹೊಸ ಯೋಜನೆಗಳನ್ನು ಪ್ರಾರಂಭಿಸುವುದನ್ನಾಗಲೀ ತಡೆಹಿಡಿದು ನಿಲ್ಲಿಸಬೇಕು.

(ii) 1991ರ ಸಿಆರ್‌ಜೆಡ್ ಅನ್ನು ಅದರಲ್ಲಿ ಸಮುದ್ರದ ಕಡೆಯ ಪ್ರದೇಶವೂ ಸೇರುವಂತೆ ಬದಲಾಯಿಸಬೇಕು ಮತ್ತು ಬಂದರು ಯೋಜನೆಗಳಿಂದ ಸಮುದ್ರದ ಮೇಲೆ ಹಾಗೂ ಸಂಬಂಧಪಟ್ಟ ಭೂಮಿಯ ಮೇಲೆ ಆಗುವ ಪರಿಣಾಮಗಳನ್ನು ನಿಯಂತ್ರಿಸುವಂತೆ ಮಾಡಬೇಕು.

(iii) ೨೦೦೯ರ ಜನವರಿ ೯ರ ಇಐಎ ಅಧಿಸೂಚನೆಯಲ್ಲಿ ಹೆಚ್ಚಿನ ಮಾಲಿನ್ಯದ ಪರಿಣಾಮವಿಲ್ಲದೆ ಇರುವ ಮತ್ತು/ಅಥವಾ ಹೆಚ್ಚುವರಿ ನೀರು ಮತ್ತು/ಅಥವಾ ಭೂಮಿಯ ಅಗತ್ಯವಿಲ್ಲದಿರುವಂಥ ಆಧುನೀಕರಣ ಅಥವಾ ವಿಸ್ತರಣಾ ಪ್ರಸ್ತಾವಗಳಿಗೆ ಪರಿಸರ ಅನುಮೋದನೆ

ಪಡೆಯುವುದರಿಂದ ವಿನಾಯತಿ ನೀಡಬೇಕೆಂದು ತಿದ್ದುಪಡಿಗಳನ್ನು ಪ್ರಸ್ತಾವಿಸಲಾಗಿದೆ.

**(ಇ) ಸಮುದ್ರದ ತೀರದ ನೀರು ಒಳನಾಡಿನ ಮಾಲಿನ್ಯ ನಿಯಂತ್ರಣಕ್ಕೆ ಒಂದು ಅಗ್ಗದ ಪರ್ಯಾಯ ವ್ಯವಸ್ಥೆ ಆಗದಂತೆ ಮಾಡಲು ಸಮುದ್ರ ತೀರದ ನೀರಿಗೆ ಕೊಳೆ ನೀರುಗಳನ್ನು ಬಿಡುವ ಬಗ್ಗೆ ಕಟ್ಟುನಿಟ್ಟಾದ ಮಾನಕ ಗುಣಮಟ್ಟಗಳನ್ನು ನಿಗದಿಪಡಿಸಬೇಕು.**

- ಸಮುದ್ರದ ಮಾಲಿನ್ಯವನ್ನು ತಗ್ಗಿಸಲು ಕ್ರಮವನ್ನು ಕೈಗೊಳ್ಳಬೇಕೆಂದು ಸಮಿತಿಯು ಬಹಳ ಬಲವಾಗಿ ಶಿಫಾರಸ್ಸು ಮಾಡುತ್ತದೆ. ಕೊಳೆ ನೀರುಗಳನ್ನು ವಿಲೇ ಮಾಡುವುದಕ್ಕೆ ನಿಗದಿಪಡಿಸಿರುವ ಮಾನಕ ಗುಣಮಟ್ಟಗಳನ್ನು ಪರಿಷ್ಕರಿಸಬೇಕೆಂದು ಸಹ ಸಮಿತಿ ಶಿಫಾರಸ್ಸು ಮಾಡುತ್ತದೆ. ಸಮುದ್ರದ ನೀರಿನ ಗುಣಮಟ್ಟದ ಮೇಲೆ ಸಾರ್ವಜನಿಕರಿಗೆ ದತ್ತಾಂಶ ಲಭಿಸುವಂತೆ ಮಾಡಿ ಅದನ್ನು ಮೇಲ್ವಿಚಾರಣೆ ಮತ್ತು ನಿಯಂತ್ರಣ ಮಾಡುವ ಒಂದು ಸಶಕ್ತವಾದ ಕಾರ್ಯಕ್ರಮವಿರಬೇಕು. ಮತ್ತು ಸಿಆರ್‌ಜೆಡ್ 1991ಕ್ಕೆ ತಿದ್ದುಪಡಿಗಳನ್ನು ಮಾಡಿ ಜಲಾಂತರ್ಗತ ಕೊಳೆ ನೀರು ಪೈಪುಲೈನ್‌ಗಳನ್ನು ಹಾಕುವುದನ್ನು ನಿಷೇಧಿಸಬೇಕು.

**(ಎಫ್) ಚರ್ಚೆ ಮತ್ತು ಸಂವಾದಗಳನ್ನು ನಡೆಸಿದ ತರುವಾಯ ಅಂಡಮಾನ್ ಮತ್ತು ನಿಕೋಬಾರ್ ಹಾಗೂ ಲಕ್ಷದ್ವೀಪಗಳಲ್ಲಿ ಹೊಸ ನಿರ್ವಹಣಾ ವ್ಯವಸ್ಥೆಯನ್ನು ಜಾರಿಗೆ ತರಬೇಕು.**

- ಅಂಡಮಾನ್, ನಿಕೋಬಾರ್ ಮತ್ತು ಲಕ್ಷದ್ವೀಪಗಳಲ್ಲಿ ಅವುಗಳ ತೀರದುದ್ದಕ್ಕೂ ಸಮಾನವಾಗಿ 500 ಮೀಟರುಗಳ ಅಗಲ ಪ್ರದೇಶದ ನಿಯಂತ್ರಣವನ್ನು ಸಿಆರ್‌ಜೆಡ್ ಅಧಿಸೂಚನೆ 1991ರಲ್ಲಿ ನಿಗದಿಪಡಿಸಲಾಗಿದೆ ಎಂಬುದು ಸಮಿತಿಯ ಗಮನಕ್ಕೆ ಬಂದಿದೆ. ಇಂಥ ಒಂದು ನಿಯಮದಿಂದಾಗಿ ಬೇರೆ ಬೇರೆ ಗಾತ್ರದ

ಮತ್ತು ಬೇರೆ ಬೇರೆ ಸ್ಥಳಗಳಲ್ಲಿರುವ ದ್ವೀಪಗಳಲ್ಲಿ ಭಿನ್ನವಾದಂಥ ಸಮಸ್ಯೆಗಳು ಉಂಟಾಗಿವೆ.

- ದ್ವೀಪಗಳ ಸಮಗ್ರ ನಿರ್ವಹಣೆಗಾಗಿ ಒಂದು ಪ್ರತ್ಯೇಕವಾದಂಥ ದ್ವೀಪಗಳ ರಕ್ಷಣಾ ವಲಯ ಅಧಿಸೂಚನೆಯನ್ನು ಮಾಡಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಈ ಅಧಿಸೂಚನೆಯಲ್ಲಿ ಈ ದ್ವೀಪಗಳ ಜೀವಿಪರಿಸರ, ಸಾಮಾಜಿಕ, ಆರ್ಥಿಕ ಸಮಸ್ಯೆಗಳು ಅದರಲ್ಲೂ ಮೀನುಗಾರರ ಸಮಸ್ಯೆಗಳನ್ನು ಸಮುದ್ರದ ಮಟ್ಟದ ಏರಿಕೆ ಹಾಗೂ ಊರ್ಜಿತವಾಗುವಂಥ ಅಭಿವೃದ್ಧಿಗಳು ಎಲ್ಲಕ್ಕೂ ಮಿಗಿಲಾಗಿ 2004ರ ಡಿಸೆಂಬರ್ 26ರಂದು ಬಂದೆರಗಿದ ಸುನಾಮಿಯ ಪರಿಣಾಮಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಆ ದ್ವೀಪದ ಆಡಳಿತ ವರ್ಗ ಮತ್ತು ಅಲ್ಲಿನ ಜನರ ಜೊತೆಯಲ್ಲಿ ಚರ್ಚೆ ಸಂವಾದಗಳನ್ನು ನಡೆಸಿ, ದ್ವೀಪಗಳ ರಕ್ಷಣಾವಲಯ ಅಧಿಸೂಚನೆಗಳನ್ನು ಅಂತಿಮಗೊಳಿಸಬೇಕು.

**(ಜಿ) ಸಂರಕ್ಷಣಾ ಕಾರ್ಯನೀತಿಗಳಿಂದ ಸ್ಥಳೀಯ ಸಮುದಾಯಗಳ ಮೇಲೆ ಅದರಲ್ಲೂ ಮೀನುಗಾರ ಕುಟುಂಬಗಳ ಮೇಲೆ ಆಗುವ ಪರಿಣಾಮಗಳನ್ನು ಬಹಳ ಎಚ್ಚರಿಕೆಯಿಂದ ಮತ್ತು ಶ್ರದ್ಧಾಪೂರ್ವಕವಾಗಿ ಅರ್ಥ ಮಾಡಿಕೊಂಡು ಬಹಳ ತುರ್ತಾಗಿ ಗಮನಿಸಬೇಕಾದ ಅಪಾಯ ಸಂಭವವಿರುವ ಸಮುದ್ರ ತೀರಗಳ ಪ್ರದೇಶಗಳ ಬಗ್ಗೆ ಯಾವುದಾದರೊಂದು ಹೊಸ ಸಂರಕ್ಷಣಾ ವ್ಯವಸ್ಥೆಯನ್ನು ಜಾರಿಗೆ ತರಬೇಕು.**

- ಅಷ್ಟೇ ಅಲ್ಲದೆ, ದೇಶದ ಸಮುದ್ರತೀರದುದ್ದಕ್ಕೂ – ಚಿಲ್ಕಾ, ಪುಲಿಕಾಟ್, ಪಿಚಾವರಂ, ಮನ್ನಾರ್‌ಕೊಲ್ಲಿ, ವೆಂಬನಾಡ್, ಕೊರಿಂಗ, ಕಚ್‌ಕೊಲ್ಲಿ ಮುಂತಾದ ಬೃಹತ್ ಸಮುದ್ರ ಪಾರ್ಕ್‌ಗಳು, ಅಭಯದಾಮಗಳು, ರಾಷ್ಟ್ರೀಯ ಉದ್ಯಾನವನಗಳು ಇವೆ ಮತ್ತು ಅದರಲ್ಲಿ ಮೀನುಗಾರ ಸಮುದಾಯದವರು ವಾಸ ಮಾಡುತ್ತಿದ್ದಾರೆ ಎಂಬ ಅಂಶವನ್ನು ಸಮಿತಿ ಗಮನಿಸಿದೆ. ಈ ವಿಶಾಲ ಜೀವಿವಲಯಗಳ (ಬಯೋಸ್ಪಿಯರ್) ಬಗ್ಗೆ ವಿಶೇಷವಾದ ಗಮನ ನೀಡಬೇಕಾಗಿದೆ. ಏಕೆಂದರೆ, ಅವು ಸ್ಥಳೀಯ ಸಮುದಾಯಗಳಿಗೆ

ಜೀವನೋಪಾಯ ಒದಗಿಸುವುದಲ್ಲದೆ, ಅಭಿವೃದ್ಧಿ ಚಟುವಟಿಕೆಗಳಿಂದ ತೊಂದರೆಗೊಳಪಡುವ ಸಾಧ್ಯತೆಯಿದೆ.

- ಮೇಲ್ಕಂಡ ಅಂಶಗಳನ್ನು ಆಧರಿಸಿ ಮಂತ್ರಾಲಯದವರು ಬಹಳ ತುರ್ತಾಗಿ ಗಮನಿಸಬೇಕಾದ ಅಪಾಯ ಸಂಭವವಿರುವ ತೀರ ಪ್ರದೇಶಗಳನ್ನು ಗುರುತಿಸಿ ರಚಿಸಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ.

**(ಎಚ್) ಸ್ಪಷ್ಟ ಮಾನದಂಡಗಳನ್ನು ರೂಪಿಸಿ ಮ್ಯಾನ್‌ಗ್ರೋವ್ ಅರಣ್ಯಕ್ಕೆ ರಕ್ಷಣೆಯನ್ನು ಬಲಪಡಿಸುವುದು.**

- ಮಂತ್ರಾಲಯದವರು ಈಗಿರುವ ಮತ್ತು ಮುಂದೆ ಬೆಳೆಯಬಹುದಾದ ಮ್ಯಾನ್ ಗ್ರೋವ್ ಅರಣ್ಯಗಳನ್ನು ರಾಷ್ಟ್ರಾದ್ಯಂತ ಗುರುತಿಸಿ ನಕಾಶೆ ರಚಿಸಬೇಕೆಂದು ಶಿಫಾರಸ್ಸು ಮಾಡುತ್ತದೆ. ಅದು ರಕ್ಷಿಸಬೇಕಾದ ಮ್ಯಾನಗ್ರೋವ್ ಪ್ರದೇಶವೆಂದರೆ ಯಾವುದು ಎಂಬುದರ ಪರಿಭಾಷೆಯನ್ನು ಒದಗಿಸಬೇಕು ಮತ್ತು ಹಸಿರು ಭಾರತ ಯೋಜನೆಯಂಥ ತನ್ನ ವನ ನಿರ್ಮಾಣ ಯೋಜನೆಗಳಲ್ಲಿ ಇವುಗಳನ್ನೂ ಮತ್ತು ಇತರ ಸೂಕ್ತ ಪ್ರದೇಶಗಳನ್ನು ಸೇರಿಸಿಕೊಳ್ಳಬೇಕು. ಅದು ತನ್ನ ಯೋಜನೆಗಳಲ್ಲಿ ಬೀಳಾಗಿಹೋದ ಪ್ರದೇಶಗಳು ಮ್ಯಾನ್ ಗ್ರೋವ್ ಅಥವಾ ಸಮುದ್ರತೀರ, ಮರಳು ಬೀಚ್‌ಗಳು ಇವುಗಳನ್ನು ಪುನರುಜ್ಜೀವನಗೊಳಿಸುವ ಪರಿಕಲ್ಪನೆಯನ್ನು ಸೇರಿಸಿಕೊಳ್ಳಬೇಕು. ಎಲ್ಲಾ ಮ್ಯಾನ್‌ಗ್ರೋವ್ ಕಾಡುಗಳನ್ನು ಜೈವಿಕ ರಕ್ಷಣೆಯೆಂಬಂತೆ ಮತ್ತು ಸಮುದ್ರ ಉತ್ಪಾದಕ ವಲಯಗಳೆಂದು ಗುರುತಿಸಿ ಕಟ್ಟುನಿಟ್ಟಾಗಿ ರಕ್ಷಿಸಬೇಕು.

**(ಐ) ಪ್ರಸಕ್ತ ಮತ್ತು ಭವಿಷ್ಯತ್ತಿನ ಅಪಾಯದ ಸಂಭವತೆಯಿಂದ ರಕ್ಷಣೆ ಒದಗಿಸುವುದಕ್ಕಾಗಿ ಸಮುದ್ರದ ಕಡೆಯ ಪ್ರದೇಶವನ್ನು ಅಧಿಸೂಚನೆಯಲ್ಲಿ ಸೇರಿಸಿಕೊಳ್ಳಬೇಕು ಮತ್ತು ಹಾಗೆ ಮಾಡುವಾಗ ಮೀನುಗಾರ ಕುಟುಂಬಗಳ ಜೀವನೋಪಾಯಕ್ಕೆ ಯಾವುದೇ ನಿರ್ಬಂಧ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು.**

- ಸಮುದ್ರ ತೀರದ ಜೀವಿಪರಿಸರವು ಸಮುದ್ರದಜಲ ಚೈತನ್ಯಶೀಲತೆಯನ್ನು ಆಧರಿಸುತ್ತದೆ. ಸಮುದ್ರದ ನೀರಿನ ಬಗ್ಗೆ ಯೋಜನೆಗಳನ್ನು ಮಾಡದೇ ನಾವು ಭೂಮಿ ಕುರಿತು ಯೋಜನೆ ಮಾಡುವುದು ಅಥವಾ ಅದನ್ನು ನಿರ್ವಹಿಸುವುದು ಸಾಧ್ಯವಿಲ್ಲ. ಅಷ್ಟೇ ಅಲ್ಲ, ಮಾಲಿನ್ಯದಿಂದ ಹಿಡಿದು ನಿರ್ಮಾಣದವರೆಗೂ ಭೂಮಿಯಲ್ಲಿ ಮಾಡುವಂಥ ಎಲ್ಲಾ ಕಾರ್ಯಗಳು ಸಮುದ್ರದ ಮೇಲೆ ಭಾರಿ ಪರಿಣಾಮಗಳನ್ನು ಉಂಟುಮಾಡಬಲ್ಲವು.

- 1991ರ ಸಿಆರ್‌ಜೆಡ್‌ನಲ್ಲಿ ಸಮುದ್ರದ ಕಡೆಯ ಪ್ರದೇಶಗಳನ್ನು ಸೇರಿಸಿಕೊಳ್ಳಬೇಕೆಂದು ಸಮಿತಿಯು ಶಿಫಾರಸ್ಸು ಮಾಡುತ್ತದೆ. ಆದರೆ ಈ ತಿದ್ದುಪಡಿಗಳು ಮೀನುಗಾರ ಸಮುದಾಯವು ವ್ಯಕ್ತಪಡಿಸುವ ಆತಂಕಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಮತ್ತು ಬಹಳ ಬಲವಾದ ಹಾಗೂ ಪರಿಣಾಮಕಾರಿಯಾದ ರಕ್ಷಣೆಗಳನ್ನು ಅವರಿಗೆ ಒದಗಿಸುವಂತಿರಬೇಕು.

**(ಜೆ) ಎಲ್ಲಾ ಮಟ್ಟಗಳಲ್ಲೂ ಸಂಶೋಧನೆ ಮತ್ತು ನಿಯಂತ್ರಕ ಸಾಮರ್ಥ್ಯಗಳನ್ನು ಬಹಳವಾಗಿ ಬಲಪಡಿಸಲು ಕ್ರಮಗಳನ್ನು ಜಾರಿಗೆ ತರುವುದು.**

- ಸಮುದ್ರ ತೀರಗಳು ಸಾಕಷ್ಟು ಬೃಹತ್ ಸವಾಲುಗಳನ್ನು ಎದುರಿಸುತ್ತಿವೆ ಎಂಬುದು ಸ್ಪಷ್ಟ. ಆದರೆ ಅವುಗಳನ್ನು ನಿರ್ವಹಿಸಬೇಕಾದರೆ ಸಮುದ್ರ ತೀರದ ಸಂಶೋಧನೆಯನ್ನು ನಡೆಸುವಂಥ ಸಂಸ್ಥೆಗಳು ನಮಗೆ ಬೇಕಾಗುತ್ತದೆ. ಪ್ರಸ್ತುತ, ದತ್ತಾಂಶ ಸಂಗ್ರಹಣೆ ಮತ್ತು ಮಾಹಿತಿಗಳ ನಡುವೆ ಅಗಾಧ ಕಂದರವಿದೆ. ಎಲ್ಲಕ್ಕೂ ಮಿಗಿಲಾಗಿ ಕಾರ್ಯನೀತಿಗಳು ಮತ್ತು ಪದ್ಧತಿಗಳನ್ನು ಬದಲಾಯಿಸುವಾಗ ಈ ಜ್ಞಾನವನ್ನು ಬಳಸಿಕೊಳ್ಳುವುದರಲ್ಲೂ ಕೊರತೆಯಿದೆ. ಕೇಂದ್ರ ಮತ್ತು ರಾಜ್ಯಗಳಲ್ಲಿ ಉತ್ತಮವಾದ ನಿರ್ಣಯಗಳನ್ನು ಕೈಗೊಳ್ಳಲು ಈಗಿರುವ ನಿಯಂತ್ರಕ ಸಂಸ್ಥೆಗಳನ್ನು ಇನ್ನಷ್ಟೂ ಬಲಪಡಿಸಬೇಕಾದ ಅಗತ್ಯವಿದೆ ಎಂಬುದು ಸ್ಪಷ್ಟ. ಅಲ್ಲದೇ ಕರಾವಳಿ ವಲಯ ನಿರ್ವಹಣೆಗಾಗಿ ಒಂದು ಹೊಸ ಸಂಸ್ಥೆಯನ್ನು ರಚಿಸಬೇಕಾದಂಥ ಅವಶ್ಯಕತೆಯು ಸ್ಪಷ್ಟವಾಗಿದೆ.

- ಅಲ್ಲದೇ, ಮಂತ್ರಾಲಯಕ್ಕೆ ಮತ್ತು ರಾಜ್ಯ ಸರ್ಕಾರಗಳಿಗೆ ನೆರವು ನೀಡಲು ಮತ್ತು ಸಂಘರ್ಷ ಪರಿಹಾರ ಅಧ್ಯಯನಗಳನ್ನು ಕೈಗೊಳ್ಳುವುದೂ ಸೇರಿದಂತೆ ಕಾರ್ಯನೀತಿ ಸಂಬಂಧಿತ ಹಾಗೂ ಕಾನೂನಿನ ಸಮಸ್ಯೆಗಳನ್ನು ಎದುರಿಸಲು ಒಂದು ಊರ್ಜಿತಗೊಳ್ಳುವ ಕರಾವಳಿ ನಿರ್ವಹಣಾ ರಾಷ್ಟ್ರೀಯ ಮಂಡಳಿಯನ್ನು ರಚಿಸಬಹುದಾಗಿದೆ.

**(ಕೆ) ಸಮುದ್ರಮಟ್ಟದ ಏರಿಕೆ ಮತ್ತು ಸಮುದ್ರ ತೀರಗಳು ಹೆಚ್ಚು ಹೆಚ್ಚು ಅಪಾಯಕ್ಕೊಳಪಡುವ ಸಂಭವನೀಯತೆಯಂಥ ಭವಿಷ್ಯದ ಅಪಾಯಗಳನ್ನು ನಿಭಾಯಿಸಲು ಮತ್ತು ಅದಕ್ಕಾಗಿ ಅಳವಡಿಸಿಕೊಳ್ಳಲು ಅಗತ್ಯವಾದ ಕಾರ್ಯನೀತಿಗಳನ್ನು ಜಾರಿಗೆ ತರುವುದು.**

- ಭವಿಷ್ಯದಲ್ಲಿ ಸಮುದ್ರದ ಮಟ್ಟ ಏರಿಕೆಯ ಕಾರಣದಿಂದ ಮತ್ತು ಚಂಡಮಾರುತಗಳು, ನೆರೆಯುಬ್ಬರಗಳು ಮುಂದೆ ಪದೇ ಪದೇ ಹೆಚ್ಚಾಗುತ್ತವೆ ಎಂಬ ಪ್ರಾಕ್ಷೇಪಿತ ಮಾಹಿತಿಗಳಿಂದ ದೇಶದ ಸಮುದ್ರ ತೀರಗಳು ಅಪಾಯವನ್ನು ಎದುರಿಸಲಿವೆ ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಈ ಬೆಳವಣಿಗೆಗಳಿಂದ ಸಮುದ್ರ ತೀರದ ವಾಸಿಗಳಿಗೆ ಅಪಾಯ ಉಂಟಾಗುವುದೇ ಅಲ್ಲದೆ ಮಿಲಿಯಾಂತರ ಜನರಿಗೆ ಜೀವನೋಪಾಯಗಳನ್ನು ಒದಗಿಸುವಂಥ ಸಮುದ್ರ ತೀರದ ಜೀವಿಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಆದುದರಿಂದ, ಮಂತ್ರಾಲಯದವರು ಸಮುದ್ರ ತೀರದುದ್ದಕ್ಕೂ ಅಪಾಯ ಒದಗುವ ಸಂಭವ ಮತ್ತು ಬರಬಹುದಾದ ಅಪಾಯಗಳ ಒಂದು ರೇಖೆಯನ್ನು ಗುರುತಿಸಿ ರೇಖಿಸುವ ಒಂದು ಯೋಜನೆಯನ್ನು ತಪ್ಪದೇ ಕೈಗೊಳ್ಳಬೇಕೆಂದು ಶಿಫಾರಸ್ಸು ಮಾಡುತ್ತದೆ. ಹೀಗೆ ಮಾಡುವಾಗ ಸಮುದ್ರ ಮಟ್ಟ ಏರಿಕೆ ಮತ್ತಿತ್ತರ ಅಪಾಯಗಳ ಪ್ರಾಕ್ಷೇಪಿತ ಮಾಹಿತಿಯಿಂದ ಈಗಿರುವ ಹಾಗೂ ಮುಂದೆ ಬರುವ ಅಪಾಯಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ.

****